716 (916) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1 4 2005 ರಿಂದ ಈವರೆಗೆ ಜಮಖಂಡಿ ತಾಲ್ಲೂಕಿನಲ್ಲಿ ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುವ ಒಕ್ಕಲುತನದ ಉಪಕರಣಗಳಾವುವು , ಯಾವುದಕ್ಕೆ ಎಷ್ಟು ರಿಯಾಯಿತಿ ಇದೆ , ಪ್ರಯೋಜನ ಪಡೆದುಕೊಂಡಿರುವ ರೈತರೆಷ್ಟು , (ವಿವರ ಒದಗಿಸುವುದು) ,

ಆ) ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುವ ವಸ್ತುಗಳ ಬೆಲೆ ಮಾರುಕಟ್ಟೆ ಬೆಲೆಗಿಂತ 2 ಪಟ್ಟು ಹೆಚ್ಚಿನ ದರದಲ್ಲಿ ರೈತರಿಗೆ ಒದಗಿಸುತ್ತಿರುವುದು ನಿಜವೇ ,

ಇ) ಎತ್ತು ಗಾಡಿಗಳನ್ನು ಇಲಾಖೆಯಿಂದ ರೂ 11500/- ರಿಂದ ರೂ 12000/- ದವರೆಗೆ ವಿತರಿಸುತ್ತಿದ್ದು, ಮಾರುಕಟ್ಟೆಯಲ್ಲಿ ನೇರವಾಗಿ ಖರೀದಿಸಿದಲ್ಲಿ ರೂ 7500/- ಕ್ಕೆ ಸಿಗುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ ,

ಈ) ರೈತರೇ ನೇರವಾಗಿ ಏಜೆನ್ಸಿಗಳ ಮೂಲಕ ಎತ್ತುಗಾಡಿಗಳನ್ನು ಖರೀದಿಸಿ, ಇಲಾಖೆಯಿಂದ ಚೆಕ್‌ನ್ನು ನೀಡುವ ಸೌಲಭ್ಯ ಕಲ್ಪಿಸಲಾಗುವುದೇ , ಇದರಿಂದ ಮಧ್ಯವರ್ತಿಗಳನ್ನು ತಪ್ಪಿಸಿ, ಸರ್ಕಾರದ ಹಣವನ್ನು ಉಳಿತಾಯ ಮಾಡಬಹುದೆಂಬ ಮಾಹಿತಿ ಸರ್ಕಾರಕ್ಕೆ ತಿಳಿದಿದೆಯೇ ,

ಉ) ಮಾಡಿದ್ದಲ್ಲಿ, ಯಾವಾಗ ಈ ಪದ್ಧತಿ ಜಾರಿಗೊಳಿಸಲಾಗುವುದು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) 1 4 2005ರಿಂದ ಇಲ್ಲಿಯವರೆಗೆ 2005 ರೈತರು ವಿವಿಧ ಒಕ್ಕಲುತನದ ಉಪಕರಣಗಳ ಪ್ರಯೋಜನ ಪಡೆದುಕೊಂಡಿದ್ದು, ಇವುಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ

ಆ) ಇಲ್ಲ

ಇ) ಇಲ್ಲ

ಈ) ಹಾಲಿ ಇರುವ ಮಾರ್ಗಸೂಚಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುವುದು

ಉ) ಉದ್ಭವಿಸುವುದಿಲ್ಲ

ಅನುಬಂಧ-

ಕ್ರ. ಸಂ	ರೈತರಿಗೆ ವಿತರಿಸಿದ ಕೃಷಿ ಉಪಕರಣಗಳು	ಪ್ರತಿ ಉಪಕರಣಕ್ಕೆ ರಿಯಾಯಿತಿ		ಪ್ರಯೋಜನ ಪಡೆದ ರೈತರ ಸಂಖ್ಯೆ
		2005-06	2006-07	
1	ಟ್ರಾಕ್ಟರ್ ಚಾಲಿತ ಎಂ.ಬಿ. ನೇಗಿಲು			
	1) 35 ಹೆಚ್.ಪಿ ಡಬ್ಬಲ್ ಬಾಟಮ್ ರಿವರ್ಸಬಲ್ ಎಂ.ಬಿ ನೇಗಿಲು	16750	16000	31
	2) 35 ಹೆಚ್.ಪಿ ಡಬ್ಬಲ್ ಬಾಟಮ್ ರಿವರ್ಸಬಲ್ ಎಂ.ಬಿ ನೇಗಿಲು	18250	16500	76
	3) 35 ಹೆಚ್.ಪಿ ಡಬ್ಬಲ್ ಬಾಟಮ್ ರಿವರ್ಸಬಲ್ ಎಂ.ಬಿ. ನೇಗಿಲು	18250	16500	35
	4) 35 ಹೆಚ್.ಪಿ ಡಬ್ಬಲ್ ಬಾಟಮ್ ರಿವರ್ಸಬಲ್ ಎಂ.ಬಿ. ನೇಗಿಲು	–	17500	05
2	ರೋಟೋವೇಟರ್	40000	33228	75
3	ಮೋಜ್ ಶ್ಲ್ಲರ್	18000	–	04
4	ಡಿಸ್ಕ್ ಹ್ಯಾರೋ-12 ಡಿಸ್ಕ್	20076	20600	31
	ಡಿಸ್ಕ್ ಹ್ಯಾರೋ-14 ಡಿಸ್ಕ್	21246	–	
5	ಐರೋಬಲ್ ಡ್ರಿಲ್-11 ಟೈನ್ಸ್	–	17625	01
6	ರಿಪ್ಪರ್ ಕಂ ಕಲ್ಟಿವೇಟರ್	850	1200	360
7	ಸಂಯುಕ್ತ ಕೂರಿಗೆ	1075	–	17
8	50" ಎಂ.ಬಿ. ನೇಗಿಲು	1100	–	19
9	ಸ್ಪ್ರಿಡರ್ ವೀಡರ್	325	350	483
10	ಕಲ್ಟಿವೇಟರ್	925	950	106
11	ರಿಪ್ಪರ್	850	900	82
12	9" ಬಲರಾಂ ನೇಗಿಲು	–	375	200
13	ನ್ಯಾಪಸ್ಯಾಕ್ ಸ್ಪ್ರೇಯರ್	525	675	283
14	ಶಕ್ತಿ ಚಾಲಿತ ಸ್ಪ್ರೇಯರ್	2000	2000	192
15	ರಾಶಿ ಯಂತ್ರ	20000	–	05
	ಒಟ್ಟು ಪ್ರಯೋಜನ ಪಡೆದ ರೈತರ ಸಂಖ್ಯೆ			2005